ದಿ: 07.08.2025

**ಓ.ಎಸ್.ನಂ :69-2023**

ಪಿ.ಡಬ್ಲ್ಯು.1

ದಿ. 07.08.2025 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿಯರ ಪರ : ಶ್ರೀ.ಎನ್.ಹೆಚ್.ಕೆ ವಕೀಲರಿಂದ**

1. ನನ್ನ ತಂದೆ 1992 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ಅವರ ತಂದೆಯಿಂದ ಬಂದ ಯಾವುದೇ ಸ್ವತ್ತುಗಳು ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಪಿತ್ರಾರ್ಜಿತ ಸ್ವತ್ತುಗಳು ಯಾವುವು ಇರಲಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ, ಅವರು ಖರೀದಿಸಿದ ಸ್ವತ್ತಿನ ಬಗ್ಗೆ ಮಾತ್ರ ಗೊತ್ತು. ದಾವಾ ಸ್ವತ್ತುಗಳು ನನ್ನ ತಂದೆ ಖರೀದಿಸಿದ ಸ್ವತ್ತುಗಳಾಗಿವೆ. ನನ್ನ ತಂದೆಗೆ 2 ಸ್ವತ್ತುಗಳು ಇದ್ದು, ಬೇರೆ ಸ್ವತ್ತುಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟ ಸುಮಾರು 9 ತಿಂಗಳ ನಂತರ ನನ್ನ ಮದುವೆ ಮಾಡಿರುತ್ತಾರೆ. ನನ್ನ ಮದುವೆಯನ್ನು ಪ್ರತಿವಾದಿಯರೆಲ್ಲರೂ ಸೇರಿ ಮಾಡಿರುತ್ತಾರೆ ಎಂದರೆ ಸರಿ. ನನ್ನನ್ನು ಲೋಕಿಕೆರೆ ಗ್ರಾಮದ ಪುರುಷೋತ್ತಮ ಎಂಬುವವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಮದುವೆ ಕಾಲಕ್ಕೆ ನನಗೆ ಒಡವೆಗಳನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಖರ್ಚಿಗಾಗಿ ಪ್ರತಿವಾದಿಯರು ಅವರಿಗೆ ಸೇರಿದ ಸೈಟ್ ಅನ್ನು 60 ಸಾವಿರ ರೂಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸೈಟ್ ಅನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಸೈಟ್ ಅನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನಗೆ ಸಾಕಷ್ಟು ಒಡವೆಗಳನ್ನು ಕೊಟ್ಟು ಸಾಕಷ್ಟು ಹಣ ಖರ್ಚು ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಖರ್ಚನ್ನು ನನ್ನ ಗಂಡನ ಮನೆಯವರೇ ನೋಡಿಕೊಂಡಿರುತ್ತಾರೆ. ಸುಮಾರು 1ಲಕ್ಷ ರೂ ಹಣವನ್ನು ಖರ್ಚು ಮಾಡಿ ಒಳ್ಳೆಯ ಮನೆತನಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ

ದಿ: 07.08.2025

ಮದುವೆಗೆ ಎಷ್ಟು ಹಣ ಖರ್ಚು ಮಾಡಿರುತ್ತಾರೆ ಎಂಬುದು ಪ್ರತಿವಾದಿಯರಿಗೆ ಗೊತ್ತು ಎಂದರೆ ಸರಿ. ನನ್ನ ಮದುವೆಯಾದ 2 ವರ್ಷಕ್ಕೆ 5 ನೇ ಪ್ರತಿವಾದಿಯನ್ನು ರಾಮಗಿರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿಯ ಮದುವೆಯನ್ನು ತಾಯಿ ಮತ್ತು ಸಹೋದರರು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಬಂದ ಹಣದಲ್ಲಿ ಮದುವೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ಮದುವೆಯಾದ ನಂತರ ನನ್ನ ಸಹೋದರರು ಒಟ್ಟು ಕುಟುಂಬದಿಂದ ಬೇರೆಯಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು 2 ಮತ್ತು 3 ನೇ ಪ್ರತಿವಾದಿಯರು ಸಮಾನವಾಗಿ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಗೆ ಹೋಗಿ ಬರುತ್ತೇನೆ. ನನ್ನ ಸಹೋದರರು ವಾಸದ ಮನೆಯನ್ನು ಮೂರು ಭಾಗ ಮಾಡಿಕೊಂಡು 1994 ರಿಂದಲೂ ಬೇರೆ ಬೇರೆಯಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಮನೆಯ ಮಧ್ಯದ ಭಾಗವು 2 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿ. ಅದೇ ರೀತಿ ಸದರಿ ಮನೆಯ ಉತ್ತರ ಭಾಗವು 3 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿ. ಸದರಿ ಮನೆಯ ದಕ್ಷಿಣ ಭಾಗವು 4 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿ. 3 ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದ ಮನೆಯನ್ನು ಆರ್.ಸಿ.ಸಿ ಮನೆಯಾಗಿ ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದ ಮನೆಯನ್ನ ದುರಸ್ಥಿ ಮಾಡಿಸಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಯರು ಅವರ ಭಾಗಕ್ಕೆ ಬಂದ ಮನೆಗಳಲ್ಲಿ 1994 ರಿಂದಲೂ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ 2 ನೇ ಪ್ರತಿವಾದಿಯೊಂದಿಗೆ ವಾಸಿಸುತ್ತಿದ್ದಾರೆ. ದಾವಾ ಐಟಂ ನಂ. 2 ರ ಸ್ವತ್ತಿನಲ್ಲಿ ಮೂಕ್ಕಾಲು ಭಾಗವನ್ನು ನನ್ನ ತಾಯಿಯ ಜೀವನಾಂಶಕ್ಕಾಗಿ ತೆಗೆದಿಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ತಾಯಿ 3 ಮತ್ತು 4 ನೇ ಪ್ರತಿವಾದಿಯರ ಮನೆಯಲ್ಲಿಯೂ ಇರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ. 2 ರ ಸ್ವತ್ತಿನಲ್ಲಿ ಉಳಿದ ಜಮೀನನ್ನು 4 ನೇ ಪ್ರತಿವಾದಿಗೆ ನೀಡಿದ್ದು, ಸದರಿ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಜಯಮ್ಮ ರವರ ಜಮೀನು, ಪಶ್ಚಿಮಕ್ಕೆ ಹೊಸದುರ್ಗಕ್ಕೆ ಹೋಗುವ ರಸ್ತೆ, ಉತ್ತರಕ್ಕೆ ಬಂಡಿದಾರಿ ಮತ್ತು ಸುಣ್ಣಗಾರ್ ಶಾಮಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ ತನ್ನ ತಾಯಿಯ

ದಿ: 07.08.2025

ಭಾಗಕ್ಕೆ ಬಂದ ಜಮೀನು ಇದೆ ಎಂದರೆ ಸರಿ. ಸದರಿ ಜಮೀನನ್ನು 4 ನೇ ಪ್ರತಿವಾದಿಯು 1994 ರಿಂದಲೂ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ. 1 ರ ಸ್ವತ್ತನ್ನು 2 ಮತ್ತು 3 ನೇ ಪ್ರತಿವಾದಿಯರು ಭಾಗ ಮಾಡಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರಿದ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸೈಟ ಅನುನ ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿಲ್ಲ ಎಂದು ನನ್ನ ವಾದಪತ್ರದಲ್ಲಿ ನಮೂದಿಸಿರುವುದಿಲ್ಲ. 2 ರಿಂದ 4 ನೇ ಪ್ರತಿವಾದಿಯರು ಮನೆಯಲ್ಲಿ ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸಮಾಡುತ್ತಿದ್ದರಿಂದ ನಾನು ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆಯನ್ನು ಮಾಡಿದ ಕಾಲಕ್ಕೆ ಜಮೀನುಗಳ ಬೆಲೆ 1 ಎಕರೆಗೆ ಸುಮಾರು 10 ಸಾವಿರ ಆಗಿತ್ತು.

**(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಪ್ರಧಾನ ಸಿವಿಲ್
ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ